1 ನೇ ಅಪರ  ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 18.12.2025 ರಂದು ಪ್ರಮಾಣ ವಚನ ಬೋದಿಸಲಾಗಿದೆ.
ಸಿ. ಡಬ್ಲ್ಯೂ: 26 ಪಿ. ಡಬ್ಲ್ಯೂ:17

| | |
|---|---|
| ಸಾಕ್ಷಿದಾರರ ಹೆಸರು | ಶಿವಪ್ಪ ಮ್ಯಾಗೇರಿ |
| ತಂದೆಯ ಹೆಸರು | ಹನುಮಂತ |
| ವಯಸ್ಸು | 29 ವರ್ಷ |
| ಉದ್ಯೋಗ | ಪೋಲಿಸ್ ಪೇದೆ, ಎಸ್.ಪಿ. ಕಚೇರಿ. ಮಂಡ್ಯ. |
| ವಾಸ | ಮಂಡ್ಯ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ದಿಃ 05.10.2018 ರಿಂದ ದಿಃ 01.08.2024 ರವರಿಗೆ ನಾನು ಬೆಳಕವಾಡಿ ಪೊಲೀಸ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.
2. ದಿಃ 04.08.2022 ರಂದು ಚಾಸಾ.30 ರವರು ಘಟನಾ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿದ್ದ ಸಮಯದಲ್ಲಿ ಪೋಟೋ ತೆಗೆಯಲು ಸೂಚಿಸಿದಂತೆ ನಾನು ಪೋಟೋಗಳನ್ನು ತೆಗೆದಿರುತೇನೆ. ಸಾಕ್ಷಿಯು ನಿಪಿ.7 ಮತ್ತು 8 ಪೋಟೋಗಳನ್ನು ನೋಡಿ ಸದರಿ ಪೋಟೋಗಳನ್ನು ತಾನು ಮಹಜರ್ ಕಾಲದಲ್ಲಿ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ.
3. ದಿಃ 31.08.2022 ರಂದು ಚಾಸಾ. 32 ರವರು ಶವತನಿಖಾ ಕಾಲದಲ್ಲಿ ಪೋಟೋ ತೆಗೆಯಲು ಸೂಚಿಸಿದ ಮೇರೆಗೆ ಸದರಿ ಸಮಯದಲ್ಲಿ ಪೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿಯು ನಿಪಿ.20 ರಿಂದ 23 ಪೋಟೋಗಳನ್ನು ನೋಡಿ ಸದರಿ ಪೋಟೋಗಳನ್ನು ತಾನು ಶವ ತನಿಖಾ ಕಾಲದಲ್ಲಿ ತೆಗೆದಿರುತ್ತೇನೆ ಎಂದು ನುಡಿಯುತ್ತಾರೆ.
4. ಸದರಿ ಪೋಟೋಗಳನ್ನು ಮಳವಳ್ಳಿಯ ಪೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿ ತನಿಖಾಧಿಕಾರಿಯವರಿಗೆ ನೀಡಿರುತ್ತೇನೆ. ಸದರಿ ಪೋಟೋಗಳ ಬಗ್ಗೆ ಕಲಂ 65(ಬಿ) ಸಾಕ್ಷ್ಯ ಅಧಿನಿಯಮದ ಪ್ರಮಾಣಪತ್ರವನ್ನು ನೀಡಿರುತ್ತೇನೆ. ನಾನು ತನಿಖಾಧಿಕಾರಿಯವರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಕಲಂ.65(ಬಿ) ಸಾಕ್ಷ್ಯ ಅಧಿನಿಯಮದ

ಪ್ರಮಾಣಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ.41 ಎಂದು, ಸಾಕ್ಷಿಯ ಸಹಿಯನ್ನು ನಿಪಿ.41(ಎ) ಮತ್ತು (ಬಿ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಃ ಆರೋಪಿ ಪರ ಶ್ರೀ ಕೆ ಟಿ ಎಸ್ ವಕೀಲರು ಃ Chief defence counsel ರವರಿಂದ ಃ</u>**

5. ಫೋಟೋ ತೆಗೆಯಲು ನನಗೆ ಲಿಖಿತ ಸೂಚನಾ ಪತ್ರವನ್ನು ನೀಡಿಲ್ಲ. ನನ್ನ ಮೊಬೈಲ್ ಕ್ಯಾಮರಾದಿಂದ ಸದರಿ ಫೋಟೋ ಗಳನ್ನು ತೆಗೆದಿದ್ದೇನೆ.
6. ಸ್ಥಳ ಮಹಜರ್ ನಡೆಸಿದ ಸ್ಥಳವು, ನಮ್ಮ ಪೊಲೀಸ್ ಠಾಣೆಯಿಂದ 14 ಕಿಮೀ ದೂರದಲ್ಲಿದೆ. ಸಂಜೆ 4.40 ಗಂಟೆಯಿಂದ 5.40 ಗಂಟೆ ತನಕ ಮಹಜರ್ ಮಾಡಿಕೊಂಡಿರುತ್ತಾರೆ.
7. ಶವ ತನಿಖೆಗೆ ಸಹಕರಿಸಲು ನನಗೆ ಲಿಖಿತ ಸೂಚನಾ ಪತ್ರವನ್ನು ನೀಡಿಲ್ಲ. ನಾನು ತೆಗೆದ ಫೋಟೋಗಳಲ್ಲಿ ದಿನಾಂಕ ಕಂಡು ಬರುವುದಿಲ್ಲ. ನಾನು ನನ್ನ ಮೊಬೈಲ್ ನಂಬರನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಸದರಿ ನಿಪಿ.41 ರಲ್ಲಿ ನನ್ನ ಮೊಬೈಲ್ ನಂಬರನ್ನು ಹೇಳಿಲ್ಲ, ಅದರಲ್ಲಿ ನನ್ನ ಮೊಬೈಲಿನ ಕಂಪನಿಯ ಹೆಸರನ್ನು ಹೇಳಿರುತ್ತೇನೆ. s
8. ಸದರಿ ಫೋಟೋ ಸ್ಟುಡಿಯೋದ ಹೆಸರು ನನಗೆ ನೆನಪಿಲ್ಲ. ಫೋಟೋ ಸ್ಟುಡಿಯೋದ ರಶೀದಿಯನ್ನು ನಾನು ಹಾಜರುಪಡಿಸಿಲ್ಲ.

**<u>ಮರು ವಿಚಾರಣೆಃ</u> ಏನು ಇಲ್ಲ**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶಿವಪ್ರಸಾದ್ ಕೆ.ಬಿ.)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.